**ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ**

**ಸಿ.ಸಿ. ನಂ. 2111/2025 ಸಿ. ಡಬ್ಲ್ಯೂ: 9 ಪಿ ಡಬ್ಲ್ಯೂ: 7**

ಸಾಕ್ಷಿಯ ಹೆಸರು : ಸಿದ್ಧಲಿಂಗೇಶ ಬೆಲ್ಲದ್

ತಂದೆಯ ಹೆಸರು : ದಾನಪ್ಪ ಬೆಲ್ಲದ್

ವಯಸ್ಸು : 53 ವರ್ಷ

ಉದ್ಯೋಗ : ಹಿರಿಯ ಮೋಟಾರ ವಾಹನ ನಿರೀಕ್ಷಕರು, ಆರ್ ಟಿ ಓ, ಧಾರವಾಡ

ವಾಸಸ್ಥಳ : ಧಾರವಾಡ.

ದಿನಾಂಕ: 01/08/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಸ ಸ ಅ ರವರಿಂದ :**

1. ನಾನು ಜುಲೈ 2019 ರಿಂದ ಇಲ್ಲಿಯರೆಗೂ ಧಾರವಾಡದ ಪ್ರಾದೇಶಿಕ ಕಚೇರಿಯಲ್ಲಿ ಮೋಟಾರ ವಾಹನ ನಿರೀಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ದಿ: 27-06-2025 ರಂದು ಕುಂದಗೋಳ ಪೋ.ಠಾಣೆಯ ಕೋರಿಕೆಯ ಮೇರೆಗೆ ಅದೇ ದಿನ ಸಂಜೆ 05-30 ಗಂಟೆಗೆ ಕುಂದಗೋಳ ಪೋ.ಠಾಣೆ ಆವರಣದಲ್ಲಿ ಮಹೀಂದ್ರಾ ಬೋಲೇರೋ ವಾಹನ ಸಂಖ್ಯೆ ಕೆಎ-25-ಡಿ-7212 ಮತ್ತು ಬಜಾಜ್ ಪಲ್ಸರ್ ಮೋಟಾರ್ ಸೈಕಲ್ ಸಂಖ್ಯೆ ಕೆ-26-ವಿ-7184 ವಾಹನಗಳನ್ನು ಪರಿಶೀಲನೆ ಮಾಡಲಾಗಿ ಮಹೀಂದ್ರಾ ಬೋಲೇರೋ ವಾಹನ ಸಂಖ್ಯೆ ಕೆಎ-25-ಡಿ-7212 ರ ಎಡ ಭಾಗದ ಡೋರನ ತರುಚಿದ ಗುರುತುಗಳು ಇತ್ತು, ಬಜಾಜ್ ಪಲ್ಸರ್ ಮೋಟಾರ್ ಸೈಕಲ್ ಸಂಖ್ಯೆ ಕೆ-26-ವಿ-7184 ರ ಬಲ ಬದಿಯ ಹೆಡ್ ಲೈಟ್ ಮಾಸ್ಕ್ ಮೇಲೆ ತರುಚಿದ ಗುರುತುಗಳು ಇದ್ದವು, ಬಲಬದಿಯ ಕ್ರ್ಯಾಶ್ ಗಾರ್ಡ ಬೆಂಡಾಗಿದ್ದು, ಎಡ ಬದಿಯ ವಿಲ್ ಗಾರ್ಡ ಮೇಲೆ ತರುಚಿದ ಗುರುತುಗಳಿದ್ದವು, ಮುಂದಿನ ಎಡ ಭಾಗದ ಇಂಡಿಕೇಟರಗಳು ಜಖಂ ಆಗಿತ್ತು. ಸದರಿ ವಾಹನಗಳನ್ನು ರಸ್ತೆ ಮೇಲೆ ಪರೀಶೀಲಿಸಿ ಎರಡು ವಾಹನಗಳ ಅಡತಡೆಗಳು ಸುಸ್ಥಿತಿಯಲ್ಲಿದ್ದವು. ಸದರಿ ಅಪಘತಾವು ನನ್ನ ಅಭಿಪ್ರಾಯದಂತೆ ಈ ಪ್ರಕರಣದ ಎರಡು ವಾಹನಗಳ ಯಾವುದೇ ವಾಹನದ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ. ಈ ಬಗ್ಗೆ ನಾನು ವರದಿಯನ್ನು ನೀಡಿದ್ದು, ಅದನ್ನು ನಿಪಿ. 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 9 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಸಿ ಎಸ್ ಪಿ ವಕೀಲರಿಂದ:**

2. ಘಟನಾ ಸ್ಥಳಕ್ಕೆ ಹೋಗಿ ವಾಹನಗಳನ್ನು ತಪಾಸಣೆ ಮಾಡಿದ್ದೀರಾ ಎಂದರೆ ಇಲ್ಲ. ಬುಲೇರೊ ವಾಹನದ ಡೋರ್ ಮೇಲೆ ಇರುವ ತರುಚಿದ ಗುರುತು ಹಾಗೂ ಮೋಟಾರ ಸೈಕಲಗೆ

ಆಗಿರುವ ಜಖಂಗಳು ಹೊಸದೋ ಅಥವಾ ಹಳೆಯದೋ ಎಂದು ನಿಪಿ. 9 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಕುಂದಗೋಳ ಪೋಲೀಸ್ ಠಾಣಾ ಆವರಣದಲ್ಲಿ ಬುಲೋರೋ ವಾಹನ ಹಾಗೂ ಮೋಟಾರ್ ಸೈಕಲನ್ನು ತಪಾಸಣೆ ಮಾಡಿಲ್ಲ ಹಾಗೂ ವರದಿಯನ್ನು ನೀಡಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಕಚೇರಿಯಲ್ಲಿ ಕುಳಿತು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ನಿಪಿ. 9 ರ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲಗೆ ನಿಪಿ. 9 ರಲ್ಲಿ ಕಾಣಿಸಿದ ಜಖಂಗಳು ಸಾಮಾನ್ಯವಾಗಿ ಮೋಟಾರ್ ಸೈಕಲ ತಾನಾಗೆ ರಸ್ತೆ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.